ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 20-02-2001.

# *ಶಿವ ಜಯಂತಿ ಅರ್ಥಾತ್ ವ್ರತವನ್ನಿಡುವುದು ಹಾಗೂ ಸರ್ವಸಮರ್ಪಣೆಯಾಗುವ ಸ್ಮೃತಿಚಿಹ್ನೆಯಾಗಿದೆ.*

(शिव जयन्ती - व्रत लेने का और सर्व समर्पण होने का यादगार है)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ತ್ರಿಮೂರ್ತಿ ರಚಯಿತ ಶಿವ ಬಾಬಾ ತಮ್ಮ ಪೂಜ್ಯ ಸಾಲಿಗ್ರಾಮಗಳನ್ನು ಭೇಟಿಯಾಗಲು ಬಂದಿದ್ದಾರೆ. ಬೇಟಿಯೂ ಆಗಬೇಕು ಹಾಗೂ ಇಂದು ಆಚರಿಸಲೂ ಬೇಕು. ನೀವೆಲ್ಲರೂ ವಿಶ್ವದ ನಾಲ್ಕಾರೂ ಕಡೆಯಿಂದ ಬಾಪ್‌ದಾದಾರವರ ಜಯಂತಿಯನ್ನು ಬಹಳ ಉತ್ಸಾಹ ಉಲ್ಲಾಸದಿಂದ ಆಚರಿಸಲು ತಲುಪಿದ್ದೀರಿ. ಮಕ್ಕಳು ಹೇಳುತ್ತಾರೆ ಬಾಬಾರವರ ಜಯಂತಿಯನ್ನು ಆಚರಿಸಲು ಬಂದಿದ್ದೇವೆ ಹಾಗೂ ತಂದೆಯು ಹೇಳುತ್ತಾರೆ ಮಕ್ಕಳ ಜಯಂತಿಯನ್ನು ಆಚರಿಸಲು ಬಂದಿದ್ದೇವೆ. ನೀವೆಲ್ಲರೂ ಸಹ ತಮ್ಮ ಜಯಂತಿ ಅಲೌಕಿಕ ಜನ್ಮದಿನ ಆಚರಿಸಲು ಬಂದಿದ್ದೀರಿ. ಇಡೀ ಕಲ್ಪದಲ್ಲಿ ಈ ರೀತಿ ಅತೀತ ಹಾಗೂ ಪ್ರಿಯ ಜನ್ಮದಿನವು ಯಾವಾಗಲೂ ನಡೆಯುವುದಿಲ್ಲ. ಇಡೀ ಕಲ್ಪದಲ್ಲಿ ನೋಡಿ, ತಂದೆ ಮತ್ತು ಮಕ್ಕಳ ಜನ್ಮದಿನವು ಒಂದೇ, ಇಂತಹ ಜನ್ಮದಿನವನ್ನು ಇಡೀ ಕಲ್ಪದಲ್ಲಿ ಎಂದಾದರೂ ನೋಡಿದ್ದೀರಾ? ಏಕೆಂದರೆ ವಿಶ್ವಪರಿವರ್ತನೆಯ ಕಾರ್ಯದಲ್ಲಿ ಶಿವ ತಂದೆ, ಬ್ರಹ್ಮಾಅಣ್ಣನ ಜೊತೆ ಜೊತೆ ಬ್ರಾಹ್ಮಣರು ಸಹ ಅವಶ್ಯವಾಗಿ ಬೇಕಾಗಿದೆ. ಬ್ರಾಹ್ಮಣರು ಇಲ್ಲದೆ ಯಜ್ಞ ಸಫಲವಾಗುವುದಿಲ್ಲ. ಆದ್ದರಿಂದ ತಂದೆ ಹಾಗೂ ಮಕ್ಕಳ ಜನ್ಮದಿನ ಒಟ್ಟಿಗೆ ಅರ್ಥಾತ್ ಒಟ್ಟಿಗೆ ಜಯಂತಿ ಇದೆ. ಮಕ್ಕಳು ಹೃದಯದಲ್ಲಿಯೇ ತಂದೆಗೆ ಶುಭಾಶಯಗಳನ್ನು ಕೊಡುತ್ತಿದ್ದಾರೆ ಹಾಗೂ ತಂದೆ ಪ್ರತಿಯೊಂದು

ಬ್ರಾಹ್ಮಣ ಮಗುವಿಗೂ ಅಲೌಕಿಕ ಜನ್ಮದಿನದ ಪದಮಕ್ಕಿಂತ ಜಾಸ್ತಿ ಹೃದಯದ ಆಶೀರ್ವಾದಗಳೊಂದಿಗೆ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಶುಭಾಶಯಗಳು, ಶುಭಾಶಯಗಳು, ಶುಭಾಶಯಗಳು! (ಎಲ್ಲರೂ ಕೈ ಅಲುಗಾಡಿಸಿದರು) ಬಹಳ ಒಳ್ಳೆಯದು- ಒಂದು ಕೈನ ಚಪ್ಪಾಳೆ ಚೆನ್ನಾಗಿದೆ, ಎರಡು ಕೈಯದಲ್ಲ. ಬಹಳ ಖುಷಿ ಇದೆ ಅಲ್ಲವೇ, ಹಾಗಾಗಿ ಕೈ ನಿಲ್ಲುವುದಿಲ್ಲ, ಚಪ್ಪಾಳೆ ಹೊಡೆದು ಬಿಡುತ್ತೀರಿ.

ಪ್ರಪಂಚದಲ್ಲಿ ಭಕ್ತ ಜನರು ಸಹ ಶಿವ ಜಯಂತಿಯನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಆದರೆ ಅವರು ಒಂದು ದಿನ ಆಚರಿಸುತ್ತಾರೆ, ಜಾಗರಣೆ ಹಾಗೂ ಒಂದು ದಿನದ ವ್ರತ ಮಾಡುತ್ತಾರೆ. ನೀವು ಮಕ್ಕಳು ಅಜ್ಞಾನದ ನಿದ್ರೆಯಿಂದ ಜಾಗರಣೆಯ ಸಂಕಲ್ಪ ಒಂದು ದಿನಕ್ಕಾಗಿ ಮಾಡಿಲ್ಲ, ಅವರು ಸಹ ಜಾಗರಣೆಯನ್ನು ಮಾಡುತ್ತಾರೆ ಆದರೆ ತಾವು ಒಂದು ಸಂಗಮಯುಗ ವಜ್ರ ಸಮಾನ ಜನ್ಮದ ಜಾಗರಣೆಯನ್ನು ಮಾಡುತ್ತೀರಿ ಹಾಗೂ ಮಾಡುತ್ತಿರುವಿರಿ. ಜಾಗೃತರಾಗಿ ಬಿಟ್ಟಿದ್ದೀರಿ ಅಲ್ಲವೇ, ಮತ್ತು ಈಗ ಮಲಗುವುದಿಲ್ಲ ಅಲ್ಲವೇ! ಅಥವಾ ಸ್ವಲ್ಪ ಸ್ವಲ್ಪ ಮಲಗಿ ಬಿಡುತ್ತೀರಾ! ಒಳ್ಳೆಯದು, ಮಲಗಬಾರದು ಎಂದ ಮೇಲೆ ಸ್ವಲ್ಪ ತೂಕಡಿಸಿ ಬಿಡುತ್ತೀರಿ! ಈ ಜಾಗರಣೆಯಲ್ಲಿ ಸ್ವಯಂ ಜಾಗೃತರಾಗಿ ಬಿಡುತ್ತೀರಿ ಮತ್ತು ಅನ್ಯರನ್ನು ಸಹ ಜಾಗೃತರನ್ನಾಗಿ ಮಾಡುತ್ತೀರಿ. *ಜ್ಞಾನದ ಜೀವನದಲ್ಲಿ ಜಾಗರಣೆ ಎಂದರೆ ಅಂಧಕಾರದಿಂದ ಪ್ರಕಾಶದಲ್ಲಿ ಬರುವುದು. ಈ ಅಲೌಕಿಕ ಜಾಗರಣೆ ಎಲ್ಲರಿಗೂ ಚೆನ್ನಾಗಿ ಎನಿಸುತ್ತದೆ ಅಲ್ಲವೇ! ಎಂದಿನಿಂದ ಜನ್ಮ ಪಡೆದು ಜಯಂತಿಯನ್ನು ಆಚರಿಸಿದಿರೋ ಅಂದಿನಿಂದ ಯಾವ ಯಾವ ವ್ರತವನ್ನು ತೆಗೆದುಕೊಂಡಿದ್ದೀರಿ ಎಂದು ನೆನಪಿದೆ ಅಲ್ಲವೇ! ಮಕ್ಕಳು ಹೇಳುತ್ತಾರೆ ನೆನಪು ಏನು, ನಮಗಂತೂ ನ್ಯಾಚುರಲ್ ಜೀವನವೇ 'ವ್ರತ' ಆಗಿದೆ. ಪವಿತ್ರ ಆಹಾರ, ಪವಿತ್ರ ವ್ಯವಹಾರ ಹಾಗೂ ಪವಿತ್ರ ವಿಚಾರ ಇದೇ ಜೀವನವಾಗಿ ಬಿಟ್ಟಿದೆ.* ಒಂದು ತಿಂಗಳು, ಎರಡು ತಿಂಗಳಿಗಾಗಿ ಅಲ್ಲ, ಜೀವನವೇ ವ್ರತವನ್ನು ಧಾರಣೆ ಮಾಡುವಂತಹದ್ದಾಗಿದೆ. ನ್ಯಾಚುರಲ್(ಸ್ವಾಭಾವಿಕ) ಆಗಿ ಬಿಟ್ಟಿದೆ ಹಾಗೂ ನೇಚರ್(ಸ್ವಭಾವ) ಆಗಿದೆ. ಪವಿತ್ರತೆಯ ನೇಚರ್ ಆಗಿಬಿಟ್ಟಿದೆ ಅಲ್ಲವೇ! ಆಗಿ ಹೋಗಿದೆಯೇ ಅಥವಾ ಮಾಡಬೇಕಾಗಿದೆ? ಆಗಿಹೋಗಿದೆ ಅಲ್ಲವೇ? ಕೇವಲ ತಲೆ ಅಲ್ಲಾಡಿಸಿ. ಆಗಿ ಹೋಗಿದೆಯೇ? ಅಪವಿತ್ರತೆಯು ಸಂಸ್ಕಾರದಿಂದ ಸಮಾಪ್ತಿ ಆಗಿದೆ ಹಾಗೂ ಪವಿತ್ರತೆ ಜೀವನದಲ್ಲಿ ಆದೇಶವಾಗಿ ಬಿಟ್ಟಿದೆ. ಇಂತಹ ವಜ್ರ ಸಮಾನ ಜಯಂತಿ ಹಾಗೂ ಸಾಲಿಗ್ರಾಮ ಜಯಂತಿ ಆಚರಿಸಿದ್ದೇವೆ. ನಾಲ್ಕಾರು ಕಡೆಯಿಂದ ದೇಶವಿದೇಶದ ಮಕ್ಕಳು ಸಹ ಜೊತೆ ಜೊತೆಯಲಿ ಆಚರಿಸುತ್ತಿದ್ದಾರೆ. ಬಾಪ್‌ದಾದಾರವರು ನೋಡುತ್ತಿದ್ದರು- ನಾಲ್ಕಾರು ಕಡೆ ತಂದೆಯ ಜೊತೆ ಹಾಗೂ ನಿಮ್ಮೆಲ್ಲರ ಜೊತೆ ಅವರು ಸಹ ಎಷ್ಟು ಖುಷಿಯಾಗಿದ್ದಾರೆ.

ಇಂದಿನ ದಿನ ವಿಶೇಷ ಭಕ್ತಜನ ನಿಮ್ಮ ನೆನಪಾರ್ಥವಾಗಿ ಬಲಿಯನ್ನು ಸಹ ಏರಿಸುತ್ತಾರೆ. ನೀವೆಲ್ಲರೂ ಮನಸ್ಸು, ವಾಣಿ, ಕರ್ಮದಿಂದ ಬಾಪ್‌ದಾದಾರವರ ಸಮ್ಮುಖದಲ್ಲಿ ಸಮರ್ಪಣೆ ಆಗುತ್ತೀರಿ, ಇದರ ನೆನಪಾರ್ಥವಾಗಿ ಭಕ್ತರು ತಮ್ಮನ್ನು ತಾವು ಬಲಿ ಕೊಡುವುದಿಲ್ಲ, ಕುರಿಯನ್ನು ಬಲಿಕೊಡುತ್ತಾರೆ. ಬೇರೆ ಯಾರು ಸಿಕ್ಕಿಲ್ಲವೇ, ಕುರಿಯೇ ಏಕೆ ಸಿಕ್ಕಿತು? ಇದರ ರಹಸ್ಯವನ್ನು ಸಹ ನೀವು ತಿಳಿದುಕೊಂಡಿದ್ದೀರಿ, ಏಕೆಂದರೆ ಎಲ್ಲದಕ್ಕಿಂತ ದೊಡ್ಡ ದೇಹ ಅಭಿಮಾನದ ಕಾರಣವಾಗಿದೆ "ನನ್ನತನ". ಈ "ನನ್ನತನವನ್ನು" ಯಾವಾಗ ಸಮರ್ಪಣೆ ಮಾಡಿ ಬಿಡುತ್ತೀರೋ ಆಗಲೇ ಬ್ರಾಹ್ಮಣರಾಗುತ್ತಾರೆ. ಕುರಿಯು ಸಹ ಏನು ಮಾಡುತ್ತದೆ? ಮೇ,ಮೇ... (ನಾನು, ನಾನು) ಇದು ಈ ದೇಹ ಅಭಿಮಾನದ ನನ್ನತನದ ಚಿಹ್ನೆಯಾಗಿದೆ ಹಾಗೂ ದೇಹ ಅಭಿಮಾನದ ನನ್ನತನ ಬಹಳ ಸೂಕ್ಷ್ಮವಾಗಿದೆ ಹಾಗೂ ಭಿನ್ನ

ಪ್ರಕಾರದ್ದಾಗಿರುತ್ತದೆ. ಎಲ್ಲದಕ್ಕಿಂತ ಮೊದಲ ನನ್ನತನ- ನಾನು ಶರೀರವಾಗಿದ್ದೇನೆ, ನಾನು ಇಂತಹವನಾಗಿದ್ದೇನೆ. ನಂತರ ಮುಂದುವರೆದರೆ ಸಂಬಂಧಗಳಲ್ಲಿ ಸಿಕ್ಕಿ ಹಾಕಿಕೊಳ್ಳುವ ಬಿನ್ನ ಬಿನ್ನ ನನ್ನತನ. ಇನ್ನು ಮುಂದೆ ಹೋದರೆ ಬಿನ್ನ ಬಿನ್ನ ಪದವಿಯ ನನ್ನತನ. ಅದಕ್ಕಿಂತ ಸೂಕ್ಷ್ಮ ತಮ್ಮ ವಿಶೇಷತೆಯ ನನ್ನತನ ಮೇಲಿನಿಂದ ಕೆಳಗೆ ತೆಗೆದುಕೊಂಡು ಬರುತ್ತದೆ. ವಿಶೇಷತೆ ಪ್ರತಿಯೊಬ್ಬರಲ್ಲಿಯೂ ಇರುತ್ತದೆ, ಯಾರಲ್ಲಿ ಸ್ಥೂಲವಾಗಿರಲಿ, ಸೂಕ್ಷ್ಮವಾಗಿರಲಿ ಯಾವುದೇ ವಿಶೇಷತೆ ಇಲ್ಲದಂತಹ ಒಬ್ಬ ಮನುಷ್ಯಾತ್ಮವಿಲ್ಲ, ಎಲ್ಲರಲ್ಲಿಯೂ ವಿಶೇಷತೆ ಇದೆ. ಜ್ಞಾನಿ ಜೀವನದಲ್ಲಿಯೂ ಸಹ ಪ್ರತಿಯೊಂದು ಬ್ರಾಹ್ಮಣನ ಒಳಗೆ ಕಡಿಮೆಯೆಂದರೆ ಕಡಿಮೆ ಒಂದು ವಿಶೇಷತೆ ಅವಶ್ಯವಾಗಿದೆ, ಆದರೆ ಜ್ಞಾನಿ ಜೀವನದಲ್ಲಿ ವಿಶೇಷತೆ ಪರಮಾತ್ಮನ ಕೊಡುಗೆಯಾಗಿದೆ. ಪರಮಾತ್ಮನ ಉಡುಗೊರೆಯಾಗಿದೆ. ಯಾವಾಗ ಪರಮಾತ್ಮನ ಕೊಡುಗೆಯನ್ನು ದೇಹಾಭಿಮಾನದ ವಶ ನನ್ನತನದಲ್ಲಿ ತರುತ್ತೀರೋ, ನಾನು ಈ ರೀತಿ ಇದ್ದೇನೆ ಇದು ರಾಯಲ್ ಅಭಿಮಾನ, ದೊಡ್ಡದಕಿಂತ ದೊಡ್ಡ 'ನನ್ನತನವಾಗಿದೆ'. ಸಮರ್ಪಣೆ ಅಂತೂ ಆಗಿದ್ದೀರಿ ಮುಂದೆ ಏನನ್ನು ನೋಡಿಕೊಳ್ಳಬೇಕು?

ಶಿಕ್ಷಕಿಯರು ಎಲ್ಲರೂ ತಮ್ಮನ್ನು ಏನೆಂದು ಹೇಳಿಕೊಳ್ಳುತ್ತೀರಿ? ಸಮರ್ಪಣೆ ಆಗಿದ್ದೀರಿ ಅಲ್ಲವೇ! ಶಿಕ್ಷಕಿಯರು ಎಲ್ಲರೂ ಸಮರ್ಪಣೆ ಆಗಿದ್ದೀರಾ? ಒಳ್ಳೆಯದು- ಪ್ರವೃತ್ತಿಯಲ್ಲಿ ಇರುವವರು ಸಮರ್ಪಣೆಯಾಗಿದ್ದೀರಾ? ಆಗಿದ್ದೀರಾ ಇಲ್ಲವೋ? ಪಾಂಡವರು ಸಮರ್ಪಿತರಾಗಿದ್ದೀರಾ? ಬಹಳ ಒಳ್ಳೆಯದು. ಶುಭಾಶಯಗಳು. ಮುಂದೆ ಏನು ಮಾಡಬೇಕು? ಸಮರ್ಪಣೆಯಂತೂ ಆಗಿಬಿಟ್ಟಿದ್ದೀರಿ, ಬಹಳ ಒಳ್ಳೆಯದು. ಈಗ ಮುಂದೆ ಏನು ಚೆಕ್(ಪರಿಶೀಲನೆ) ಮಾಡಿಕೊಳ್ಳಬೇಕು, ಹೇಳಲೇ? ನೀವು ಹೇಳುತ್ತೀರಿ, ಸಮರ್ಪಣೆ ಅಂತೂ ಆಗಿದ್ದೇವೆ ಮತ್ತಿನ್ನೇನು ಮಾಡಬೇಕು? ಒಂದಾಗಿದೆ ಸಮರ್ಪಣೆ ಹಾಗೂ ನಂತರ ಆಗಿದೆ- 'ಸರ್ವಸಮರ್ಪಣೆ'. ವಿಶೇಷವಾಗಿ 'ಸರ್ವ'ದ ಅಂಡರ್ ಲೈನ್ ಇದೆ. ತಮ್ಮ ಮನಸ್ಸು, ಬುದ್ಧಿ, ಸಂಸ್ಕಾರ ಸಹಿತವಾದ ಸಮರ್ಪಣೆ ಏಕೆಂದರೆ ಎಷ್ಟು ಮುಂದುವರೆದು ಪುರುಷಾರ್ಥದಲ್ಲಿ ತೀವ್ರ ಹೆಜ್ಜೆಯನ್ನು ಹಾಕುತ್ತೀರೋ, ತೀವ್ರ ಹೆಜ್ಜೆಯನ್ನು ಹಾಕುತ್ತಾ ಇರುವಿರಿ ಆದರೆ **ವರ್ತಮಾನ ವಾಯುಮಂಡಲ ಪ್ರಮಾಣ ಬ್ರಾಹ್ಮಣ ಜೀವನದಲ್ಲಿಯೂ ಸಹ ಮನಸ್ಸು ಹಾಗೂ ಬುದ್ಧಿಯ ಮೇಲೆ ವ್ಯರ್ಥದ ಪ್ರಭಾವ, ಕೆಟ್ಟದಲ್ಲ, ಕೆಟ್ಟದ್ದು ಸಮಾಪ್ತಿ ಆಗಿದೆ ಆದರೆ ವ್ಯರ್ಥ ಹಾಗೂ ನಕಾರಾತ್ಮಕತೆಯ ಪ್ರಭಾವ ಜಾಸ್ತಿ ಇದೆ, ಆದ್ದರಿಂದ ಯಥಾರ್ಥ ಹಾಗೂ ಸತ್ಯ ನಿರ್ಣಯ ಮಾಡುವ ಶಕ್ತಿ ಕಡಿಮೆಯಾಗಿ ಬಿಡುತ್ತದೆ. ತಿಳುವಳಿಕೆಯಿಂದ ಅನುಭವವಾಗುತ್ತದೆ- ಹೌದು ಇದು ತಪ್ಪಾಗಿದೆ, ಇದು ಸರಿ ಇಲ್ಲ ಆದರೆ ಒಂದಾಗಿರುತ್ತದೆ ವಿವೇಕದಿಂದ ಅರಿವು, ಎರಡನೆಯದಾಗಿ ಇದೆ ಹೃದಯದಿಂದ ಆಗುವ ಅರಿವು. ಒಂದು ವೇಳೆ ಹೃದಯದಿಂದ ಯಾವುದೇ ಮಾತನ್ನು ಅನುಭವ ಮಾಡಿದರೆ ಪ್ರಪಂಚವೇ ಬದಲಾಗಲಿ ಆದರೆ ಸ್ವಯಂ ಬದಲಾಗುವುದಿಲ್ಲ.** ಹಾಗೂ ಸಂಸ್ಕಾರ, ಹಳೆಯ 63 ಜನ್ಮಗಳದಾಗಿ ಇರುವ ಕಾರಣ ಸ್ವಾಭಾವಿಕವಾಗಿಬಿಟ್ಟಿದೆ, ಇದನ್ನೇ ಇನ್ನೊಂದು ಶಬ್ದದಲ್ಲಿ ಹೇಳುತ್ತೀರಿ ಇದು 'ತಪ್ಪಲ್ಲ ಆದರೆ ನನ್ನ ಸಂಸ್ಕಾರವಾಗಿದೆ'. ಹಳೆಯ ಸಂಸ್ಕಾರಗಳು ಕೆಲವೊಂದು ಸಮಾಪ್ತಿಯಾಗುತ್ತದೆ, ಇನ್ನೂ ಕೆಲವು ಅಡಗಿ ಹೋಗುತ್ತಿವೆ ಅವು ಮತ್ತೆ ಹೊರಗೆ ಬರುತ್ತಿವೆ. ಆದರೆ ಸರ್ವಸಮರ್ಪಣೆಯ ಅರ್ಥವೇ ಆಗಿದೆ- ಮನಸ್ಸಿನ ಭಾವ ಹಾಗೂ ಭಾವನೆ ಪ್ರತಿಯೊಂದು ಆತ್ಮನ ಪ್ರತಿ ಪರಿವರ್ತನೆ ಆಗುವುದು. ಇದನ್ನೇ ಬಾಪ್‌ದಾದಾರವರು ಹೇಳುತ್ತಾರೆ ಯಾವುದೇ ಆತ್ಮ ಇರಲಿ, ಬಿನ್ನ ಬಿನ್ನದವರಂತು ಇದ್ದೇ ಇರುತ್ತಾರೆ, ಕಲ್ಪವೃಕ್ಷವಾಗಿದೆ, ವಿವಿಧತೆ ಇಲ್ಲದಿದ್ದರೆ ಶೋಭೆ ಇರುವುದಿಲ್ಲ ಆದರೆ ಪ್ರತಿಯೊಂದು ಆತ್ಮನ ಪ್ರತಿ ಶುಭಭಾವನೆ ಹಾಗೂ ಶುಭಕಾಮನೆ. ಅಶುಭ ಭಾವನೆಯನ್ನು

ಸಹ ಪರಿವರ್ತನೆ ಮಾಡಿ ಶುಭಭಾವನೆ ಇಡುವುದು ಅಥವಾ ಶುಭಭಾವನೆಯನ್ನು ಕೊಡುವುದು. **ಪ್ರತಿಯೊಂದು ಆತ್ಮನ ಪ್ರತಿ ಶುಭಕಾಮನೆ, ಇವರು ಅವಶ್ಯವಾಗಿ ಬದಲಾಗುತ್ತಾರೆ ಎಂಬ ಶುಭಕಾಮನೆ ಇರಬೇಕು. ಇವರಂತೂ ಎಂದೂ ಬದಲಾಗುವುದೇ ಇಲ್ಲ, ಅವರ ಪ್ರತಿ ಜಡ್ಜ್ ಆಗಿ ನಿರ್ಣಯವನ್ನು ಕೊಡಬೇಡಿ,- ಇವರು ಬದಲಾಗುವುದೇ ಇಲ್ಲ. ಯಾವಾಗ ಚಾಲೆಂಜ್ ಮಾಡಿದ್ದೀರಿ- ಪ್ರಕೃತಿಯನ್ನು ಸಹ ಪರಿವರ್ತನೆ ಮಾಡಿ ಸತೋಗುಣಿ ಮಾಡಲೇಬೇಕು, ಮಾಡಲೇಬೇಕು, ಆಗುತ್ತದೆಯೋ ಇಲ್ಲವೋ ಎಂಬ ಪ್ರಶ್ನೆ ಇಲ್ಲ, ಆಗಲೇಬೇಕು. 'ಆಗಲೇಬೇಕು' ಎಂಬ ಶಬ್ದವನ್ನು ಅಂಡರ್ ಲೈನ್ ಮಾಡಲಾಗಿದೆ. ಪ್ರಕೃತಿಯೇ ಬದಲಾವಣೆಯಾಗುತ್ತದೆ ಎಂದ ಮೇಲೆ, ಆತ್ಮ ಬದಲಾಗಲು ಸಾಧ್ಯವಿಲ್ಲವೇ? ಆತ್ಮ ಒಂದು ಪ್ರಕೃತಿಯ ಪುರುಷವಾಗಿದೆ(ಮಾಲೀಕನಾಗಿದೆ). ಪ್ರಕೃತಿ ಬದಲಾಗಿ, ಪುರುಷ ಬದಲಾವಣೆ ಆಗದಿರಲು ಸಾಧ್ಯವೇ? ಆದ್ದರಿಂದ ವರ್ತಮಾನ ಸಮಯ ಈ ಮನಸ್ಸು, ಬುದ್ಧಿ, ಸಂಸ್ಕಾರ, ಸ್ವಯಂನ ಪರಿವರ್ತನೆ ಹಾಗೂ ಸರ್ವರ ಪರಿವರ್ತನೆ- ಇದೇ ಸೇವೆಯಾಗಿದೆ.**

ಎಲ್ಲರೂ ಕೇಳುತ್ತಾರೆ– ಈ ವರ್ಷದಲ್ಲಿ ಏನು ಮಾಡುತ್ತೀರಿ? ಡಬಲ್ ಸೇವೆಯನ್ನು ಮಾಡಬೇಕು. ಒಂದು ಸ್ವಯಂನ್ನು ಸರ್ವ ಸಮರ್ಪಣೆ ಮತ್ತು ಎಷ್ಟು ಸಮರ್ಪಣೆ ಮಾಡಬೇಕೆಂದರೆ ನಿಮ್ಮ ವಾಯುಮಂಡಲ, ನಿಮ್ಮ ವೈಬ್ರೇಷನ್, ನಿಮ್ಮ ಸಂಗ, ನಿಮ್ಮ ಹೃದಯದ ಸಹಯೋಗ, ನಿಮ್ಮ ಹೃದಯದ ಆಶೀರ್ವಾದ ಅನ್ಯರನ್ನು ಸಹ ಸಹಜವಾಗಿ ಪರಿವರ್ತನೆ ಮಾಡುವುದರಲ್ಲಿ ಸಹಯೋಗ ಕೊಡುತ್ತದೆ. ಇಷ್ಟು ಸ್ವ ಪರಿವರ್ತನೆಯಾಗಬೇಕು. ಸರ್ವ ಸಮರ್ಪಣೆ ಮಾಡಬೇಕು. ಒಂದು ಈ ಸೇವೆ ಮತ್ತು ಇನ್ನೊಂದು ಲೋಕ ಸೇವೆ ಆಗಿದೆ, ನಾಲ್ಕಾರು ಕಡೆ ದೇಶದಲ್ಲಿ, ವಿದೇಶದಲ್ಲಿ, ಹಳ್ಳಿಯಲ್ಲಿ ಎಲ್ಲಾ ಬ್ರಾಹ್ಮಣ ಮಕ್ಕಳು ಇಲ್ಲಿಯವರೆಗೆ ಯಾವ ಸೇವೆಯನ್ನಾದರೆ ಮಾಡಿದ್ದಾರೆಯೋ ತಂದೆಯ ಮೇಲಿನ ಪ್ರೀತಿಯಿಂದ ಮಾಡಿದ್ದಾರೆ, ಇದನ್ನು ಫಲಿತಾಂಶದಲ್ಲಿ ನೋಡಿ ಬಾಪ್‌ದಾದಾರವರು ಬಹಳ ಬಹಳ ಬಹಳ ಶುಭಾಷಯಗಳನ್ನು ಕೊಡುತ್ತಾರೆ. ಮುಂದೇನು ಮಾಡಬೇಕು?

ಬಾಪ್‌ದಾದಾರವರು ನೋಡಿದರು ಯಾರು ಬ್ರಾಹ್ಮಣರಿದ್ದಾರೆಯೋ ಇನ್ನೂ ಬ್ರಾಹ್ಮಣರ ವೃದ್ಧಿ ಎಂಬುವುದು ಬಹಳಷ್ಟು ತೀವ್ರವಾಗಿ ಆಗುತ್ತದೆ ಆದರೆ ಜೊತೆ ಜೊತೆ ಯಾವುದಾದರೂ ಲೋಕಕ್ಕೆ ಪ್ರಿಯವಾದ ಸೇವೆ ವಿಧ ವಿಧವಾದ ಪ್ರಾಜೆಕ್ಟ್ ಗಳ ಮೂಲಕ ಮಾಡುತ್ತಿದ್ದೀರೋ ಆ ಸೇವೆಯು ಬಹಳ ಚೆನ್ನಾಗಿದೆ. ಈಗ ಭಿನ್ನ-ಭಿನ್ನ ಸ್ಥಾನಗಳಲ್ಲಿ ಸಹಯೋಗಿ ಆತ್ಮರು ಚೆನ್ನಾಗಿ ನಿಮಿತ್ತರಾಗಿದ್ದಾರೆ. ಸಹಯೋಗಿಗಳಂತು ಬಹಳ ಚೆನ್ನಾಗಿದ್ದಾರೆ, ಸಹಯೋಗದ ಒಂದು ಕಾಲಿನ ಹೆಜ್ಜೆಯಂತು ಮುಂದಿಟ್ಟಿದ್ದೀರಿ ಆದರೆ ಇನ್ನೊಂದು ಕಾಲಿನ ಹೆಜ್ಜೆ ಸಹಜಯೋಗಿ, ಕರ್ಮಯೋಗಿ. ಕರ್ಮಯೋಗಿ ಅಥವಾ ಸಹಜಯೋಗಿಗಳು ಕೆಲ-ಕೆಲವರಾಗಿದ್ದಾರೆ, ಈ ಸ್ಟೇಜ್ ಮತ್ತೊಂದಾಗಿದೆ. ಈಗ ಈ ರೀತಿ ಆತ್ಮರು ಪ್ರಾಕ್ಟಿಕಲ್ ಸ್ವರೂಪದಿಂದ ಸ್ಟೇಜಿನ ಮೇಲೆ ಪಾತ್ರವನ್ನಭಿನಯಿಸಲಿ. ಮೈಕ್ ಸ್ಟೇಜಿನ ಮೇಲಿರುತ್ತದೆಯಲ್ಲವೇ! ಮೈಕ್ ಆಗಿ ಸೇವೆಯ ಸ್ಟೇಜಿನ ಮೇಲೆ ಪ್ರತ್ಯಕ್ಷ ಸ್ವರೂಪದಲ್ಲಿ ಅವಶ್ಯವಾಗಿ ಬರುವರು. ನೀವು ಮೈಟ್ (ಶಕ್ತಿ) ಆಗಿದ್ದೀರಿ, ಅವರು ಮೈಕ್ ಆಗಿದ್ದಾರೆ. ಹೇಗೆ ಬ್ರಹ್ಮಾ ತಂದೆ ಅವ್ಯಕ್ತ ರೂಪದಲ್ಲಿ ಮೈಟ್ ಆಗಿದ್ದಾರೆ, ಮತ್ತು ನೀವು ಮಕ್ಕಳನ್ನು ಮೈಕನ್ನಾಗಿ ಮಾಡಿದರೋ ಹಾಗೆಯೇ ನೀವು ಮೈಟ್ ಆಗಿ ಮತ್ತು ಇಂತಹ ಮೈಕ್ ತಯಾರು ಮಾಡಿರಿ. ಬಹಳ ಒಳ್ಳೊಳ್ಳೆಯ, ಭರವಸೆಯುಳ್ಳವರು ತೀವ್ರವಾಗಿ ಹೋಗುವವರು, ಕೇವಲ ಈಗ ಮತ್ತು ಇಂತಹ ಆತ್ಮರ ಸಂಬಂಧವನ್ನು ಹೆಚ್ಚಿಸುವ

ಅವಶ್ಯಕತೆಯಿದೆ. ಅವರು ಬಯಸುತ್ತಾರೆ ಏನು ಮಾಡಬೇಕು, ಹೇಗೆ ಮಾಡಬೇಕು, ಅವರನ್ನು ಮೈಟ್ ಮಾಡಿ ವಿಧಿಯನ್ನು ಈ ರೀತಿ ತಿಳಿಸಿ ಅದರಿಂದಲೇ ಲೌಕಿಕ ಕರ್ತವ್ಯ ಮತ್ತು ಅಲೌಕಿಕ ಸೇವೆ ಎರಡರ ಬಾಲೆನ್ಸ್ ಇಟ್ಟುಕೊಳ್ಳುತ್ತಾ ಲಾಸ್ಟ್ ಸೋ ಫಾಸ್ಟ್, ಫಾಸ್ಟ್ ಸೋ ಫಸ್ಟ್ ಲೈನ್ನಲ್ಲಿ ಬಂದುಬಿಡಲಿ. ಪ್ರತ್ಯಕ್ಷರಾಗುವವರಿರಲಿ. ಕೇವಲ ಕನೆಕ್ಷನ್(ಸಂಬಂಧ) ಮತ್ತು ಕರೆಂಟ್(ಶಕ್ತಿ) ಕೊಡಿ, ಆತ್ಮೀಯತೆಯ ಕರೆಂಟ್, ವೈಬ್ರೇಷನ್, ವಾಯುಮಂಡಲದ ಕರೆಂಟ್ ಮತ್ತು ವಿಧಿಯನ್ನು ಕೊಡಿ. ಯಾರಾದರೇ ಹೀಗೆ ಸಮಾನತೆಯುಳ್ಳ ಜೀವನವನ್ನು ತಯಾರು ಮಾಡಿಕೊಳ್ಳುವುದರಲ್ಲಿ ನಿಮಿತ್ತರಾಗುತ್ತಾರೆಯೋ ಅವರ ಜೀವನ ಬಹಳಷ್ಟು ಚೆನ್ನಾಗಿ ಮತ್ತು ಸಹಜವಾಗಿ ಇರುತ್ತದೆ. ಒಳ್ಳೆಯದಲ್ಲವೇ! ಏನು ಮಾಡಬೇಕು? ಎಂಬುದು ತಿಳಿದಿದ್ದೀರಲ್ಲವೇ?

ಚಿಕ್ಕ ಚಿಕ್ಕ ಹೂಗುಚ್ಛಗಳನ್ನು ತಯಾರೂ ಮಾಡಿರಿ. ದೊಡ್ಡ ಹೂಗುಚ್ಛಲ್ಲ, 5 ಹೂಗಳದ್ದು, 10 ಹೂಗಳ ಹೂಗುಚ್ಛವನ್ನು ತನ್ನಿರಿ. ಮತ್ತು ಎಲ್ಲಾ ಕಡೆ ಬಾಪ್‌ದಾದಾರವರ ದೃಷ್ಟಿಯಲ್ಲಿದ್ದೀರಿ. ಕೇಳಿದ್ದೀರಾ! ಪಾಂಡವರು ಕೇಳಿದ್ದೀರಾ? ಬಹಳ ಒಳ್ಳೆಯದು.

ಡಬಲ್ ವಿದೇಶಿಯರು ಜಂಪ್ ಅಲ್ಲ ಆದರೆ ಹಾರುತ್ತಿದ್ದಾರೆ, ಮೊದಲನೇ ಹೂಗುಚ್ಛನ್ನು ವಿದೇಶದವರು ತರುತ್ತೀರಾ ಅಥವಾ ಭಾರತದವರು ತರುತ್ತೀರಾ? ಯಾರು ತರುತ್ತೀರಿ? ಇಬ್ಬರೂ ಜೊತೆಯಲ್ಲಿ ತರುತ್ತೀರಾ? ಒಂದು ಕಡೆಯಿಂದ ವಿದೇಶದವರು, ಒಂದು ಕಡೆ ಭಾರತದವರು, ಎರಡು ಹೂಗುಚ್ಛಗಳು ಸ್ಟೇಜಿನ ಮೇಲೆ ಬರಲಿ. ಹೇಗೆ ಈ ಕಾರ್ಯಕ್ರಮ ಆಚರಿಸುತ್ತಿದ್ದೀರೋ ಹಾಗೆಯೇ ಆ ಕಾರ್ಯಕ್ರಮವನ್ನು ಆಚರಿಸುವಿರಿ, ಎರಡು ಹೂಗುಚ್ಛಗಳದ್ದು, ಭಾರತದ್ದು ಮತ್ತು ವಿದೇಶದವರದ್ದು ಸಹ. ಸರಿಯೇ? ವಿದೇಶದವರು ಏನು ತಿಳಿಯುತ್ತೀರಿ. ಸರಿಯಿದೆ. ಮುಂದಿನ ಸೀಜನಿನಲ್ಲಿ ತರುವಿರಾ? ತರಬೇಕಾ? ಭಾರತದವರು ತರುತ್ತೀರಾ? ಲೌಕಿಕ ಮತ್ತು ಅಲೌಕಿಕ ಕರ್ತವ್ಯದ ಬ್ಯಾಲೆನ್ಸ್‌ನವರು. ನೀವು ಕೇವಲ ಬ್ರಾಹ್ಮಣ ಜೀವನದವರಲ್ಲ, ಲೌಕಿಕವೂ ಸಹ ಅಲೌಕಿಕವೂ ಸಹ, ಅವರ ಪ್ರಭಾವ ಹೆಚ್ಚಿರುತ್ತದೆ. ನಿಮ್ಮಿಂದ ದೃಷ್ಟಿಯನ್ನು ತೆಗೆದುಕೊಳ್ಳಲು ಬರುವರು. ಒಳ್ಳೆಯದು. ಏನು ಯೋಚಿಸುತ್ತಿದ್ದೀರಿ ಜಯಂತಿ? ಹೆಸರು ಯೋಚಿಸುತ್ತಿದ್ದೀರೇನು? ಇವರು ನಿರ್ಮಲಾ, ಮೋಹಿನಿ ಹೆಸರು ಯೋಚಿಸುತ್ತಿದ್ದಾರಲ್ಲವೇ! ಇಲ್ಲಿ ಪಾಂಡವರನ್ನು ನೋಡಿ, ಭಾರತದ ಪಾಂಡವರೇನು ಕಡಿಮೆಯಿದ್ದಾರೆಯೇ, ಸುಭಾನಲ್ಲಾ. ಇದು ನೋಡಿ, ಕೆಲ-ಕೆಲವರು ಕುಳಿತ್ತಿದ್ದಾರೆ. ಬ್ರಾಯನ್ ಸಮ್ಮುಖದಲ್ಲಿ ಕುಳಿತ್ತಿದ್ದಾರಲ್ಲವೇ! (ಆಸ್ಟ್ರೇಲಿಯಾದ ಬ್ರಾಯನ್ ಸಹೋದರನೊಂದಿಗೆ) ಹೂಗುಚ್ಛನ್ನು ತಯಾರಿ ಮಾಡಬೇಕಲ್ಲವೇ! ಬಹಳ ಒಳ್ಳೊಳ್ಳೆಯವರು ಏನು ಹೆಸರು ಕೊಡುತ್ತೀರಿ, ಎನ್. ಸಿ. ಓ, ಒಳ್ಳೆಯದು. ವಿದೇಶದ ಎನ್. ಸಿ. ಓ ನವರು ಕೈಯನ್ನು ಎತ್ತಿರಿ. ಎನ್. ಸಿ. ಓ ಮಾಡುವುದು ಸಹಜವಲ್ಲ, ಕಮಾಲ್ ಮಾಡಬೇಕಾಗುತ್ತದೆ. ಮಾಡಬಹುದು ಯಾವುದೇ ದೊಡ್ಡ ಮಾತಲ್ಲ ಏಕೆಂದರೆ ಧರಣಿ ತಯಾರಾಗಿದೆ. ಬೀಜವು ಬಿದ್ದಿದೆ ಕೇವಲ ಪಾಲನೆಯ ನೀರು ಕೊಡಬೇಕಾಗಿದೆ. ಈಗ ಬೀಜಕ್ಕೆ ಪಾಲನೆಯ ನೀರು ಬೇಕಾಗಿದೆ. ಒಳ್ಳೆಯದು.

ಟೀಚರ್ಸ್ ಸಹ ಬಹಳ ಬಂದಿದ್ದೀರಿ. ಟೀಚರ್ಸ್ಗೂ ಸಹ ಶುಭಾಷಯಗಳು. ನೀವೇ ಸೇವೆಯನ್ನು ಮಾಡಿದ್ದೀರಲ್ಲವೇ! ಸೇವೆಯ ಶುಭಾಷಯಗಳು. ಒಳ್ಳೆಯದು. ಗುಜರಾತಿನ ಸಮಾಚಾರವೇನು? (ಗುಜರಾತಿನಲ್ಲಿ ಬಹಳ

ದೊಡ್ಡ ಭೂಕಂಪ ಬಂದಿದೆ) ಏರುಪೇರು ಗುಜರಾತಿನಿಂದ ಶುರುವಾಗಿದೆ. ಹೆಚ್ಚು ಏರುಪೇರು ಗುಜರಾತ್ ಮತ್ತು ವಿದೇಶದಲ್ಲಿಯೂ ಸ್ವಲ್ಪ-ಸ್ವಲ್ಪ ಶುರುವಾಗಿದೆ. ಭಯಪಡುವುದಿಲ್ಲ ತಾನೇ! ಧರಣಿಯು ಅಲುಗಾಡುತ್ತದೆ ಆದರೆ ಹೃದಯವಂತು ಅಲುಗಾಡುವುದಿಲ್ಲವೇ! ಎಲ್ಲಿ ಧರಣಿ ಅಲುಗಾಡುತ್ತದೆ, ನಷ್ಟವಾಗಿದೆಯೋ ಅಲ್ಲಿಂದ ಯಾರು ಬಂದಿದ್ದೀರಿ ಅವರು ಎದ್ದೇಳಿ. ಅಹಮದಾಬಾದ್ ಅವರು ಎದ್ದೇಳಿ. ಒಳ್ಳೆಯದು. ಹೃದಯ ಅಲುಗಾಡುತ್ತದೆಯೇ ಅಥವಾ ಧರಣಿ ಅಲುಗಾಡುತ್ತದೆಯೇ? ಏನಾಯಿತು? ಹೃದಯದಲ್ಲಿ ಸ್ವಲ್ಪ ಹಾಗೆ-ಹೀಗೆ ಆಯ್ತಾ? ಆಗಿಲ್ಲವೇ! ಬಹದ್ದೂರ್ ಆಗಿದ್ದೀರಿ. ಬಾಪ್‌ದಾದಾರವರು ನೋಡಿದರು ಮಕ್ಕಳು ತಮ್ಮ ಧೈರ್ಯ ಮತ್ತು ತಂದೆಯ ಛತ್ರಛಾಯೆಯಿಂದ ಒಳ್ಳೆಯ ತಮ್ಮ ರಿಕಾರ್ಡ್ ಇಟ್ಟುಕೊಂಡಿದ್ದಾರೆ. ಯಾರು ಫೇಲ್ ಆಗಿಲ್ಲ, ಎಲ್ಲರೂ ಪಾಸ್ ಆಗಿದ್ದಾರೆ, ಕೆಲವರು ಕಡಿಮೆ, ಕೆಲವರು ಹೆಚ್ಚು. ಎಲ್ಲಾ ಸ್ಥಾನದಲ್ಲಿ ನಂಬರ್‌ವಾರಂತೂ ಇದ್ದೇ ಇರುತ್ತಾರೆ. ಆದರೆ ಪಾಸ್ ಆಗಿದ್ದಾರೆ. ಶುಭಾಷಯಗಳು. ಎಲ್ಲದಕ್ಕಿಂತ ಹೆಚ್ಚು ಸೂಕ್ಷ್ಮ ಸ್ಥಾನದಿಂದ ಯಾರು ಬಂದಿದ್ದಾರೆ? (ಭುಜ್ಜಿಂದ ಒಬ್ಬ ಸಹೋದರಿ ಮತ್ತು ಭಚೌದಿಂದ ಒಬ್ಬ ಸಹೋದರಿ ಬಂದಿದ್ದಾರೆ). ಒಳ್ಳೆಯದು, ಭುಜ್ನಲ್ಲಿ ನೀವಂತು ಸಾವಿರ ಭುಜವುಳ್ಳವರ ಜೊತೆಯಲ್ಲಿ ಇದ್ದೀರಿ. ಒಳ್ಳೆಯದು, ಪೇಪರ್ನಲ್ಲಿ ಪಾಸ್. ಬಹಳ ಚೆನ್ನಾಗಿ ಮಾಡಿದರು. ಮುಂದೆಯೂ ಅಲುಗಾಡಬೇಡಿ. ಹೀಗಂತು ಆಗುತ್ತಿರುತ್ತದೆ. ಭಯಪಡಬೇಡಿ. (ಪ್ರತಿದಿನವಾಗುತ್ತದೆ) ಆಗಲಿ. ನೋಡಿ ಪರಿವರ್ತನೆಯಂತು ಆಗುತ್ತದೆಯಲ್ಲವೇ! **ಪ್ರಕೃತಿಯು ಸಹ ತನ್ನ ಕೆಲಸ ಮಾಡುತ್ತದೆಯಲ್ಲವೇ! ಯಾವಾಗ ಮನುಷ್ಯಾತ್ಮರು ಪ್ರಕೃತಿಯನ್ನು ತಮೋಗುಣಿಯನ್ನಾಗಿ ಮಾಡಿದರೋ, ಅದು ತನ್ನ ಕೆಲಸವಂತು ಮಾಡುತ್ತದೆಯಲ್ಲವೇ. ಆದರೆ ಪ್ರತಿ ಆಟ, ಡ್ರಾಮಾದ ಆಟದಲ್ಲಿ ಇದು ಸಹ ಆಟವಾಗಿದೆ. ಆಟವನ್ನು ನೋಡುತ್ತಾ ತಮ್ಮ ಸ್ಥಿತಿಯನ್ನು ಮೇಲೆ ಕೆಳಗೆ ಮಾಡಬಾರದು. ಮಾಸ್ಟರ್ ಸರ್ವಶಕ್ತಿವಂತ ಆತ್ಮರ ಸ್ವ-ಸ್ಥಿತಿಯ ಮೇಲೆ ಪರ-ಸ್ಥಿತಿಯ ಪ್ರಭಾವ ಬೀಳಬಾರದು. ಆತ್ಮರನ್ನು ಮಾನಸಿಕ ತೊಂದರೆಗಳಿಂದ ಬಿಡಿಸಲು ನಿಮಿತ್ತರಾಗಿ ಏಕೆಂದರೆ ಮನಸ್ಸಿನ ತೊಂದರೆಗಳನ್ನು ನಿಮ್ಮ ಯೋಗದ ಮೂಲಕವೇ ಸಮಾಪ್ತಿ ಮಾಡಬಹುದು. ವೈದ್ಯರು ತಮ್ಮ ಕೆಲಸವನ್ನು ಮಾಡುವರು, ವಿಜ್ಞಾನದವರು ತಮ್ಮ ಕೆಲಸ ಮಾಡುವರು, ಸರ್ಕಾರ ತನ್ನ ಕೆಲಸ ಮಾಡುವುದು, ನಿಮ್ಮ ಕೆಲಸವಾಗಿದೆ ಮನಸ್ಸಿನ ತೊಂದರೆ, ಒತ್ತಡವನ್ನು ಸಮಾಪ್ತಿ ಮಾಡುವುದು. ಒತ್ತಡ ರಹಿತ ಜೀವನದ ದಾನ ಕೊಡುವುದು. ಸಹಯೋಗ ಕೊಡುವುದು.** ಹೇಗೆ ವರ್ತಮಾನ ಸಮಯ ದೇಶ ವಿದೇಶದವರು ಸಹಯೋಗಿಗಳಾಗಿ ಸಹಯೋಗವನ್ನು ಕೊಡುತ್ತಿದ್ದಾರಲ್ಲವೇ! ಬಹಳ ಚೆನ್ನಾಗಿ ಮಾಡುತ್ತಿದ್ದೀರಿ. ಇದರಿಂದ ಸಿದ್ಧವಾಗುತ್ತದೆ ವಿದೇಶದವರಾಗಲಿ, ಯಾರೇ ಆಗಲಿ ಆದರೆ ಭಾರತ ದೇಶದೊಂದಿಗೆ ಪ್ರೀತಿಯಿದೆ. ಪ್ರತಿಯೊಬ್ಬರು ತಮ್ಮ-ತಮ್ಮ ಕಾರ್ಯವನ್ನಂತು ಮಾಡುತ್ತಿದ್ದಾರೆ, ನೀವು ನಿಮ್ಮ ಕಾರ್ಯವನ್ನು ಮಾಡುತ್ತಿದ್ದೀರಿ. ಹೇಗೆ ಬೆಂಕಿ ಹತ್ತಿದ್ದರೆ ಬೆಂಕಿಯನ್ನು ಆರಿಸುವವರು ಗಾಬರಿಯಾಗುವುದಿಲ್ಲ, ಆರಿಸುತ್ತಾರೆ. ನೀವೆಲ್ಲರೂ ಸಹ ಮನಸ್ಸಿನ ತೊಂದರೆಗಳ ಬೆಂಕಿ ಆರಿಸುವವರಾಗಿದ್ದೀರಿ. ಒಳ್ಳೆಯದು. ಗುಜರಾತಿನವರು ಶಕ್ತಿಶಾಲಿಯಾಗಿದ್ದೀರಲ್ಲವೇ! ಸಾವಿರ ಭುಜಗಳ ಛತ್ರಛಾಯೆಯಲ್ಲಿದ್ದೀರಿ. ಎಲ್ಲೇ ಬರಲಿ, ಈಗಂತು ಗುಜರಾತಿನವರನ್ನು ನೋಡಿ ಅನುಭವಿಗಳಾಗಿದ್ದೀರಲ್ಲವೇ. ಎಲ್ಲೇ ಬರಲಿ. ನೋಡಿ, ಪ್ರಕೃತಿಗೆ ಬೇಡ ಎಂದು ಹೇಳಲು ಸಾಧ್ಯವಿಲ್ಲ, ಗುಜರಾತಿನಲ್ಲಿ ಬರಲಿ, ಅಬುವಿನಲ್ಲಿ ಬೇಡ, ಬಾಂಬೆಯಲ್ಲಿ ಬೇಡ, ಇಲ್ಲ. ಅದು ಸ್ವತಂತ್ರವಾಗಿದೆ. ಆದರೆ ಎಲ್ಲರೂ ತಮ್ಮ ಸ್ವ-ಸ್ಥಿತಿಯನ್ನು ಅಚಲ-ಅಡೋಲ ಮತ್ತು ತಮ್ಮ ಬುದ್ಧಿಯನ್ನು, ಮನಸ್ಸಿನ ಲೈನನ್ನು ಸ್ಪಷ್ಟವಾಗಿ ಇಟ್ಟುಕೊಳ್ಳಬೇಕು. ಲೈನ್ ಸ್ಪಷ್ಟವಾಗಿದ್ದರೆ ಟಚಿಂಗ್ ಇರುತ್ತದೆ. ಬಾಪ್‌ದಾದಾರವರು ಮೊದಲು ಸಹ ಹೇಳಿದ್ದರು– ಅವರದ್ದು ವೈಯರ್ಲೆಸ್ ಆಗಿದೆ,

ನಿಮ್ಮದು ನಿರ್ವಿಕಾರಿ ಬುದ್ಧಿಯಾಗಿದೆ. ಏನು ಮಾಡಬೇಕು, ಏನು ಆಗಬೇಕು, ಈ ನಿರ್ಣಯ ಸ್ವಷ್ಟ ಮತ್ತು ಶೀಘ್ರವಾಗುವುದು. ಹೊರಗೆ ಹೋಗುವುದೇ, ಒಳಗಡೆ ಕುಳಿತುಕೊಳ್ಳುವುದೇ, ಬಾಗಿಲಲ್ಲಿ ಕುಳಿತುಕೊಳ್ಳುವುದೇ, ಛಾವಣಿಯ ಮೇಲೆ ಕುಳಿತುಕೊಳ್ಳುವುದೇ ಎಂದು ಯೋಚಿಸಬೇಡಿ. ಇಲ್ಲ. ನಿಮ್ಮ ಕಾಲುಗಳು ಎಲ್ಲಿ ಸುರಕ್ಷಿತವಿದೆಯೋ ಅಲ್ಲಿಯೇ ಹೋಗುವುದು. ಮತ್ತು ಒಂದುವೇಳೆ ಬಹಳ ಗಾಬರಿಯಾದರೆ ಗಾಬರಿಯಾಗಬಾರದು, ಆದರೆ ಬಹಳ ಗಾಬರಿಯಾಗುವುದು, ಬಹಳ ಭಯವಾದರೆ ಮಧುಬನ ಆಶ್ರಯ ಮನೆ ನಿಮ್ಮದಾಗಿದೆ. ಭಯಬೀತವಾಗಬೇಡಿ. ಈಗಂತು ಏನು ಇಲ್ಲ, ಇನ್ನೂ ಎಲ್ಲವೂ ಆಗಬೇಕು, ಭಯಪಡಬಾರದು, ಆಟವಾಗಿದೆ. ಪರಿವರ್ತನೆಯಾಗಬೇಕಲ್ಲವೇ. ವಿನಾಶವಲ್ಲ, ಪರಿವರ್ತನೆಯಾಗುವುದಿದೆ. ಎಲ್ಲರಲ್ಲಿ ವೈರಾಗ್ಯ ವೃತ್ತಿ ಉತ್ಪನ್ನವಾಗುವುದಿದೆ. ದಯಾಹೃದಯಿಯಾಗಿ ಸರ್ವಶಕ್ತಿಗಳ ಮೂಲಕ ಶಕ್ತಿಯನ್ನು ಕೊಡುವ ದಯೆ ತೋರಿಸಿ. ತಿಳಿಯಿತೇ. ಒಳ್ಳೆಯದು.

ಈಗ ಒಂದು ಸೆಕೆಂಡಿನಲ್ಲಿ ಮನಸ್ಸು ಮತ್ತು ಬುದ್ಧಿಯನ್ನು ಏಕಾಗ್ರ ಮಾಡಬಹುದೇ? ಸ್ಟಾಪ್, ಕೇವಲ ಸ್ಟಾಪ್ ಆಗಿಬಿಡಿ. ಈಗ ಒಂದು ಸೆಕೆಂಡಿಗಾಗಿ ಮನಸ್ಸು ಮತ್ತು ಬುದ್ಧಿಯನ್ನು ಪೂರ್ಣ ಏಕಾಗ್ರ ಬಿಂದು, ಬಿಂದುವಿನಲ್ಲಿ ಸಮಾವೇಶವಾಗಲಿ. ಒಳ್ಳೆಯದು. (ಬಾಪ್‌ದಾದಾರವರು ಡ್ರಿಲ್ ಮಾಡಿಸಿದರು).

**ನಾಲ್ಕಾರು ಕಡೆಯ ಸರ್ವ ಶ್ರೇಷ್ಠ ಬ್ರಾಹ್ಮಣ ಆತ್ಮರನ್ನು, ನಾಲ್ಕಾರು ಕಡೆಯ ಸದಾ ದೃಢ ಸಂಕಲ್ಪದ ವ್ರತವನ್ನು ಇಟ್ಟುಕೊಳ್ಳುವಂತಹ ಅಚಲ ಆತ್ಮರಿಗೆ, ನಾಲ್ಕಾರು ಕಡೆಯ ಸರ್ವ ಸಾಹಸ-ಉಲ್ಲಾಸದ ಸ್ವ ಸೇವೆ ಮತ್ತು ಲೋಕ ಕಲ್ಯಾಣದ ಸೇವೆ ಮಾಡುವಂತಹ ಮಹಾನ್ ಸೇವಾಧಾರಿ ಆತ್ಮರಿಗೆ, ಇಂದು ಶಿವ ಜಯಂತಿಯ, ವಜ್ರ ಸಮಾನ ಜಯಂತಿಯ, ಭಿನ್ನ ಮತ್ತು ಪ್ರಿಯ ಜಯಂತಿಯ ಶುಭಾಷಯಗಳು, ಮತ್ತು ಆಶೀರ್ವಾದದ ಜೊತೆ ನೆನಪು ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 20-02-2001.

***ಶಿವ ಜಯಂತಿ ಅರ್ಥಾತ್ ವ್ರತವನ್ನು ಇಡುವುದು ಹಾಗೂ ಸರ್ವಸಮರ್ಪಣೆಯಾಗುವ ಸ್ಮೃತಿ ಚಿಹ್ನೆಯಾಗಿದೆ.***

ಮನಸ್ಸು, ಬುದ್ಧಿ, ಸಂಸ್ಕಾರಸಹಿತವಾಗಿ ಸಮರ್ಪಣೆಯಾಗಬೇಕು. ಏಕೆಂದರೆ ಎಷ್ಟು ಮುಂದುವರೆದು ಪುರುಷಾರ್ಥದಲ್ಲಿ ತೀವ್ರ ಹೆಜ್ಜೆಯನ್ನು ಹಾಕುತ್ತಿರೋ ಮತ್ತು ಹಾಕಿಸುತ್ತಿರೋ, ವರ್ತಮಾನ ವಾಯುಮಂಡಲವನ್ನು ಅನುಸರಿಸಿ ಬ್ರಾಹ್ಮಣ ಜೀವನದಲ್ಲಿಯೂ ಸಹ ವ್ಯರ್ಥದ ಪ್ರಭಾವ ಕೆಟ್ಟದ್ದಲ್ಲ, ಕೆಟ್ಟದ್ದು ಸಮಾಪ್ತಿಯಾಗಿದೆ ಆದರೆ ವ್ಯರ್ಥ ಹಾಗೂ ನಕಾರಾತ್ಮಕತೆಯ ಪ್ರಭಾವ ಜಾಸ್ತಿ ಇದೆ. ಆದ್ದರಿಂದ ಯಥಾರ್ಥ ಹಾಗೂ ಸತ್ಯ ನಿರ್ಣಯ ಮಾಡುವ ಶಕ್ತಿ ಕಡಿಮೆಯಾಗಿ ಬಿಡುತ್ತದೆ. ತಿಳುವಳಿಕೆಯಿಂದ ಅನುಭವವಾಗುತ್ತದೆ ಹೌದು ಇದು ತಪ್ಪಾಗಿದೆ, ಇದು ಸರಿ ಇಲ್ಲ. ಆದರೆ ಒಂದಾಗಿರುತ್ತದೆ ವಿವೇಕದಿಂದ ಅರಿವು, ಎರಡನೆಯದಾಗಿದೆ ಹೃದಯದಿಂದ ಆಗುವ ಅರಿವು ಒಂದು ವೇಳೆ ಹೃದಯದಿಂದ ಯಾವುದೇ ಮಾತನ್ನು ಅನುಭವ ಮಾಡಿದರೆ ಪ್ರಪಂಚವೇ ಬದಲಾಗಲಿ ಆದರೆ ಸ್ವಯಂ ಬದಲಾಗುವುದಿಲ್ಲ. ಎಂದು ಬಾಪ್‌ದಾದಾ ಅಲೌಕಿಕ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಲು ಬಂದಿರುವ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅಂಧಕಾರದಿಂದ ಪ್ರಕಾಶದಲ್ಲಿ ಬರುವ ಅಲೌಕಿಕ ಜಾಗರಣೆಯನ್ನು ಮಾಡಿ ವಜ್ರ ಸಮಾನ ಜಯಂತಿಯನ್ನು ಆಚರಿಸಿಕೊಂಡಿದ್ದೇನೆ.

2. ನಾನು ಅಲೌಕಿಕ ಜನ್ಮ ಪಡೆಯುತ್ತಲೇ ಪವಿತ್ರತೆಯನ್ನು ನನ್ನ ಸಂಸ್ಕಾರವನ್ನಾಗಿ ಮಾಡಿಕೊಂಡಿದ್ದೇನೆ.

3. ನಾನು ಈ ದೇಹ ಅಭಿಮಾನದ ನಾನು ಎಂಬುದನ್ನು ಅರ್ಪಣೆ ಮಾಡಿರುವ ಬ್ರಾಹ್ಮಣನು.

4. ನಾನು ಹೃದಯದಿಂದ ಯಾವುದಾದರೂ ವಿಷಯವನ್ನು ಅನುಭವ ಮಾಡಿಕೊಂಡರೆ ಪ್ರಪಂಚ ಬದಲಾದರೂ ಸ್ವಯಂ ಮಾತ್ರ ಬದಲಾಗುವುದಿಲ್ಲ.

5. ಪ್ರತಿಯೊಂದು ಆತ್ಮನ ಪ್ರತಿ ನನ್ನ ಮನಸ್ಸಿನ ಭಾವನೆ ಮತ್ತು ಭಾವ ಪರಿವರ್ತನೆಯಾಗಿದೆ.

6. ನಾನು ಸ್ವಯಂ ಸರ್ವ ಸಮರ್ಪಣೆಯಿಂದ ನನ್ನ ವಾಯುಮಂಡಲ, ವೈಬ್ರೇಶನ್, ಸಂಗ, ಹೃದಯದ ಸಹಯೋಗ, ಹೃದಯದ ಆಶೀರ್ವಾದಗಳಿಂದ ಇತರರಿಗೆ ಸಹಜವಾಗಿ ಪರಿವರ್ತನೆ ಆಗುವುದರಲ್ಲಿ ಸಹಯೋಗಿಯಾಗಿದ್ದೇನೆ.

7. ನಾನು ಸಹಯೋಗಿ ಆತ್ಮರಿಗೆ ಮೈಟ್ ಆಗಿ ಅವರ ಲೌಕಿಕ ಕರ್ತವ್ಯ ಮತ್ತು ಅಲೌಕಿಕ ಸೇವೆ ಎರಡರ ಬ್ಯಾಲೆನ್ಸ್‌ಅನ್ನು ಇಟ್ಟುಕೊಂಡು ಫಸ್ಟ್ ಲೈನ್ ನಲ್ಲಿ ಬರುವ ರೀತಿ ಕನೆಕ್ಷನ್ ಮತ್ತು ಆತ್ಮೀಯತೆಯ ಕರೆಂಟ್, ವೈಬ್ರೇಶನ್, ವಾಯುಮಂಡಲದ ಕರೆಂಟ್ ಕೊಡುತ್ತಿದ್ದೇನೆ.

8. ನಾನು ಸ್ವ-ಸ್ಥಿತಿಯಿಂದ ಪರ-ಸ್ಥಿತಿ ಆತ್ಮರ ಮಾನಸಿಕ ತೊಂದರೆಗಳನ್ನು ಮತ್ತು ಗಾಬರಿಯನ್ನು ತೊಲಗಿಸುವ ಸಹಯೋಗವನ್ನು ಕೊಡುವ ಮಾಸ್ಟರ್ ಸರ್ವಶಕ್ತಿವಂತನು.

9. ನಾನು ಸ್ವ-ಸ್ಥಿತಿಯನ್ನು ಅಚಲ, ಸ್ಥಿರವಾಗಿ ಮತ್ತು ನನ್ನ ಬುದ್ಧಿಯನ್ನು, ಮನಸ್ಸಿನ ಲೈನನ್ನು ಸ್ಪಷ್ಟವಾಗಿಟ್ಟುಕೊಂಡು ಬಾಪ್‌ದಾದಾರವರ ಪ್ರೇರಣೆ(ಟಚಿಂಗ್)ಯಿಂದ ನನ್ನ ನಿರ್ಣಯವನ್ನು ಸ್ಪಷ್ಟವಾಗಿ ಮತ್ತು ಶೀಘ್ರವಾಗಿ ತೆಗೆದುಕೊಳ್ಳುತ್ತಿದ್ದೇನೆ.

10. ನಾನು ದಯಾ ಹೃದಯಿಯಾಗಿ ಸರ್ವಶಕ್ತಿಗಳ ಮೂಲಕ  ಶಕ್ತಿಯನ್ನು ಕೊಡುವ ದಯೆಯನ್ನು ತೋರಿಸುತ್ತಿದ್ದೇನೆ.